ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ,
ಲಕ್ಷ್ಮೀಪುರಂ, ಮೈಸೂರು – ೫೭೦ ೦೦೪,
ದೂ: (ಕ:) (೦೮೨೧) ೨೪೦೨೧೪೧, ಫ್ಯಾಕ್ಸ್: ೨೪೦೨೧೧೪

J.L.B. Road, Near Ashoka Circle,
Lakshmipuram, Mysore- 570 004
Ph. Off: (0821) 2402141, Fax: 2402114
ಇಮೇಲ್ ಐಡಿ: **musicuniversitymys@gmail.com**

**ದಿನಾಂಕ:01.07.2022**

## ಪ್ರಶಿಕ್ಷಣ ಸಮಿತಿ ಸಭೆಯ ನಡವಳಿ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಸಮಿತಿಯ 21 ನೇ** ಸಭೆಯು **ದಿನಾಂಕ:01.07.2022** ರ **ಶುಕ್ರವಾರದಂದು ಮಧ್ಯಾಹ್ನ 3.30 ಗಂಟೆಗೆ** ವಿಶ್ವವಿದ್ಯಾಲಯದ **ಮಾನ್ಯ ಕುಲಪತಿಯವರ** ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಜರುಗಿದ್ದು **ಸದರಿ ಸಭೆಯ ನಡವಳಿ.**

**ಸಭೆಯಲ್ಲಿ ಉಪಸ್ಥಿತಿ ಇದ್ದವರು**

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ಪದನಾಮ |
|---|---|---|
| 01 | **ಪ್ರೊ. ನಾಗೇಶ್ ವಿ. ಬೆಟ್ಟಕೋಟೆ**<br>ಮಾನ್ಯ ಕುಲಪತಿಗಳು<br>ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ,<br>**ಮೈಸೂರು.** | **ಅಧ್ಯಕ್ಷರು** |
| 02 | **ನಿರ್ದೇಶಕರು**<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ,<br>ಕನ್ನಡ ಭವನ, ಜೆ.ಸಿ.ರಸ್ತೆ.<br>**ಬೆಂಗಳೂರು** | **ಸದಸ್ಯರು** |
| 03 | **ಶ್ರೀ ಗಣೇಶ ಜೆ. ಕೊಲಂಬಿ**<br>ಶ್ರೀ ಸಂಗಮೇಶ್ವರ ನಾಟ್ಯ ಸಂಘ<br>**ಶಿವಮೊಗ್ಗ.** | **ಸದಸ್ಯರು** |
| 04 | **ಶ್ರೀ ಎನ್. ಶ್ರೀನಾಥ್**<br>ಶ್ರೀ ಭಗವತಿ ನಿಲಯ, ನಂ 1475/ಕೆ4<br>3ನೇ ಕ್ರಾಸ್, ತ್ಯಾಗರಾಜ ರಸ್ತೆ<br>ಕತ್ವಾಡಿಪುರ ಅಗ್ರಹಾರ<br>ಕೆ. ಆರ್. ಮೊಹಲ್ಲಾ,<br>**ಮೈಸೂರು– 570024** | **ಸದಸ್ಯರು** |

ಕುಲಸಚಿವ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004

ಕುಲಪತಿ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

| | | |
|---|---|---|
| **05** | **ಡಾ. ಆರ್. ವಿ. ರಾಘವೇಂದ್ರ**<br>ನಂ91/2, 4ನೇ ಮೇನ್<br>13ನೇಕ್ರಾಸ್, ಮಲ್ಲೇಶ್ವರಂ<br>**ಬೆಂಗಳೂರು 560003.** | ಸದಸ್ಯರು |
| **06** | **ಶ್ರೀ ಮಂಜಪ್ಪ .ಎಂ**<br>ನಂ. 52, ಅಯೋದ್ಯಾ ನಗರ<br>ಶ್ರೀರಾಂಪುರ 2ನೇ ಹಂತ<br>ನಾಯ್ಡು ಸ್ಟೋರ್ ಹತ್ತಿರ<br>**ಮೈಸೂರು-570034.** | ಸದಸ್ಯರು |
| **07** | **ಶ್ರೀಮತಿ ಅನುರಾಧ ವಿಕ್ರಾಂತ್**<br>ನಂ 174, ಜಿ ಬ್ಲಾಕ್,<br>9ನೇ ಕ್ರಾಸ್, ಸಹಕಾರ ನಗರ,<br>**ಬೆಂಗಳೂರು – 560092.** | ಸದಸ್ಯರು |
| **08** | **ಶ್ರೀ ವೇಣುಗೋಪಾಲ್**<br>ಬಿನ್ ಬಿ.ಸಿ. ಬಸಪ್ಪ<br>ತುಂಬಸೋಗೆ ಗ್ರಾಮ ಮತ್ತು ಅಂಚೆ<br>ಹೆಚ್.ಡಿ.ಕೋಟೆ ತಾಲ್ಲೂಕು<br>**ಮೈಸೂರು ಜಿಲ್ಲೆ.** | ಸದಸ್ಯರು |
| **09** | **ಪ್ರೊ. ಟಿ.ಎಸ್. ದೇವರಾಜ**<br>**ಕುಲಸಚಿವರು**<br>ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಸಸಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ,<br>**ಮೈಸೂರು.** | **ಪದನಿಮಿತ್ತ ಸದಸ್ಯ ಕಾರ್ಯದರ್ಶಿ** |

**ಸಭೆಯಲ್ಲಿ ಅನುಉಪಸ್ಥಿತಿ ಇದ್ದವರು**

| | | |
|---|---|---|
| **01** | **ಪ್ರಧಾನ ಕಾರ್ಯದರ್ಶಿಯವರು**<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ) ಕರ್ನಾಟಕ ಸರ್ಕಾರದ ಸಚಿವಾಲಯ ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಡಾ.ಬಿ.ಆರ್. ಅಂಬೇಡ್ಕರ್ ವೀದಿ, **ಬೆಂಗಳೂರು-560 001** | ಸದಸ್ಯರು |
| **02** | **ಪ್ರಧಾನ ಕಾರ್ಯದರ್ಶಿಯವರು**<br>ಆರ್ಥಿಕ ಇಲಾಖೆ, ವಿಧಾನಸೌಧ, 2ನೇ ಮಹಡಿ<br>ಡಾ.ಬಿ.ಆರ್. ಅಂಬೇಡ್ಕರ್ ವೀದಿ<br>**ಬೆಂಗಳೂರು-560 001** | ಸದಸ್ಯರು |

ಕುಲಸಚಿವ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004

ಕುಲಪತಿ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004

| | | |
|---|---|---|
| 03 | ಪ್ರಧಾನ ಕಾರ್ಯದರ್ಶಿಯವರು<br>ಕನ್ನಡ ಮತ್ತು ಸಂಸ್ಕತಿ ಇಲಾಖೆ, ವಿಕಾಸಸೌಧ<br>ಡಾ.ಬಿ.ಆರ್. ಅಂಬೇಡ್ಕರ್ ವೀದಿ<br>**ಬೆಂಗಳೂರು-560 00** | ಸದಸ್ಯರು |
| 04 | ಶ್ರೀ ಎ. ಎಸ್. ಪ್ರಸನ್ನ ಕುಮಾರ್<br>#2688, 3 ನೇ ಕ್ರಾಸ್,<br>ಕನಕದಾಸ ನಗರ, ದಟ್ಟಗಳ್ಳಿ,<br>**ಮೈಸೂರು-570 023** | ಸದಸ್ಯರು |
| 05 | ಶ್ರೀಮತಿ ರಮ್ಯ ವಶಿಷ್ಟ<br>ನಂ. 59. ನಿಸರ್ಗ ಅಪಾರ್ಟಮೆಂಟ್<br>ಎಸ್ 3, 10ನೇ ಎ ಮೇನ್<br>17ನೇ ಕ್ರಾಸ್, ಮಲ್ಲೇಶ್ವರಂ<br>**ಬೆಂಗಳೂರು- 56005** | ಸದಸ್ಯರು |

**ಸಭೆಯ ಆರಂಭದಲ್ಲಿ ಮಾನ್ಯ ಸಭ್ಯಾಧ್ಯಕ್ಷರು ಸಭೆಗೆ ಹಾಜರಾದ ಸದಸ್ಯರುಗಳಿಗೆ ಸ್ವಾಗತ ಕೋರಿದರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು, ಸದರಿ ವಿಷಯಗಳನ್ನು ಕುರಿತು ಸಭೆಯು ಕೂಲಂಕುಷವಾಗಿ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಂಡಿತು.**

| ಕ್ರ ಸಂ | **ವಿಷಯ ಸೂಚಿ** |
|---|---|
| 01 | **ವಿಷಯ: ದಿನಾಂಕ:17.12.2021 ರಂದು ಜರುಗಿದ 20 ನೇ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡವಳಿಯನ್ನು ಸ್ಥೀರಿಕರಿಸುವುದು.**<br><br>**ನಿರ್ಣಯ: ದಿನಾಂಕ:17.12.2021 ರಂದು ಜರುಗಿದ 20 ನೇ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡವಳಿಯ ವಿಷಯ 15.3 ರ ಪ್ರಸ್ತಾವನೆಯನ್ನು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು. ವಿದ್ಯಾರ್ಥಿಗಳು ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು ಸಹ ಈ ಹಿಂದೆ ಶಿಕ್ಷಕರೊಬ್ಬರು ವಿದ್ಯಾರ್ಥಿಗಳನ್ನು ಮನೆ ಪಾಠಕ್ಕೆ ಕರೆದಿದ್ದು, ವಿದ್ಯಾರ್ಥಿಗಳು ರಾತ್ರಿ ವೇಳೆ ತೊಂದರೆಯಾಗುತ್ತಿದ್ದ ಕಾರಣದಿಂದ ಮನೆ ಪಾಠಕ್ಕೆ ಹೋಗುವುದನ್ನು ನಿಲ್ಲಿಸಿದ್ದ ಕಾರಣವಾಗಿ ಆಂತರಿಕ ಅಂಕಗಳು ಕಡಿಮೆ ಆಗಿವೆ ಎಂದು ದೂರು ಸಲ್ಲಿಸಿದ್ದು ಪ್ರಶಿಕ್ಷಣ ಮತ್ತು ಪ್ರಶಾನ ಸಭೆಯಲ್ಲಿ ಚರ್ಚೆಯಾಗಿರುತ್ತದೆ. ಈ ಸಂಬಂಧ ಕೃಪಾಂಕಗಳ ವಿಚಾರದಲ್ಲಿ ನಿರ್ಣಯ ತೆಗೆದುಕೊಂಡ ಬಗ್ಗೆ ಹಾಗೂ ಕೃಪಾಂಕ ನೀಡಿ ಫಲಿತಾಂಶವನ್ನು ಪ್ರಕಟಿಸಿರುವ ಮಾಹಿತಿಯನ್ನು ಪಡೆದು ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ಹಾಗೂ ಆಂತರಿಕ ಮೌಲ್ಯಮಾಪಕರನ್ನು ಮೌಲ್ಯಮಾಪನಕ್ಕೆ ಪರಿಗಣಿಸಬಾರದೆಂದು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಹಾಗೂ ದಿನಾಂಕ:17.12.2021 ರಂದು ಜರುಗಿದ ಪ್ರಶಿಕ್ಷಣ ಪರಿಷತ್ತಿನ 20 ನೇ ಸಭೆಯ ನಡವಳಿಯನ್ನು ಸಭೆಯು ಸ್ಥೀರಿಕಸಿ ಅನುಮೋದಿಸಿತು.** |
| 02 | ವಿಷಯ: ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಅಧ್ಯನ ಮಂಡಳಿ ಮತ್ತು ಪರೀಕ್ಷ ಮಂಡಳಿಗಳನ್ನು ಪುನರ್ ರಚಿಸುವ ಪ್ರಸ್ತಾವ. |

ಕುಲಸಚಿವ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004

ಕುಲಪತಿ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004

| | |
|---|---|
| | **ನಿರ್ಣಯ: ಸಭೆಯು ಸದರಿ ಪ್ರಸ್ತಾವನೆಯನ್ನು ಚರ್ಚಿಸಿ ರಾಷ್ಟ್ರೀಯ ಶಿಕ್ಷಣ ನೀತಿಯ ಹಿನ್ನಲೆಯಲ್ಲಿ ಹಾಗೂ ರಾಷ್ಟ್ರೀಯ ಕಾರ್ಯಗಾರವನ್ನು ಆಯೋಜಿಸಿ ಪಠ್ಯಕ್ರಮಗಳನ್ನು ರಚಿಸ ಬೇಕಾಗಿರುವುದರಿಂದ ವಿಶ್ವವಿದ್ಯಾಲಯಗಳ ಎಲ್ಲಾ ವಿಭಾಗಗಳ ಅಧ್ಯಯನ ಮಂಡಳಿಯನ್ನು ಮತ್ತು ಪರೀಕ್ಷ ಮಂಡಳಿಗಳನ್ನು ಪುನರ್ ರಚಿಸಲು ಅನುಮೋದಿಸಿತು.** |
| 03 | ವಿಷಯ: ವಿಶ್ವವಿದ್ಯಾಲಯವು ರಾಜ್ಯದ ವಿವಿಧ ಸ್ಥಳಗಳಲ್ಲಿ ಪ್ರಾದೇಶಿಕ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವ.<br><br>**ನಿರ್ಣಯ: ಮಂಡ್ಯ ಮತ್ತು ಹುಣಸೂರಿನಲ್ಲಿ ನಡೆಯುತ್ತಿದ್ದ ಕೇಂದ್ರಗಳನ್ನು ಪುನರಾರಂಭಿಸಿ, ಬೆಂಗಳೂರಿನಲ್ಲಿ –2 ಕೇಂದ್ರಗಳನ್ನು ಗುಲ್ಬರ್ಗ, ಹುಬ್ಬಳ್ಳಿ –ಧಾರವಾಡ, ಮಂಗಳೂರು, ಬೆಳಗಾಂ ಈ ಸ್ಥಳಗಳಲ್ಲಿ ಪ್ರಾದೇಶಿಕ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಸದರಿ ಕೇಂದ್ರಗಳನ್ನು ಮುನ್ನಡೆಸುವ ನಿಟ್ಟಿನಲ್ಲಿ ಸಂಯೋಜಕರ ನೇಮಕಾತಿ ಕುರಿತು ಸುಧೀರ್ಘವಾಗಿ ಚರ್ಚಿಸಿ ಶಿಕ್ಷಕರನ್ನೇ ಸಂಯೋಜಕರಾಗಿ ನೇಮಿಸಿ ಕಛೇರಿ ಕೆಲಸದ ಸಂಬಂಧವಾಗಿ ಗೌರವ ಸಂಭಾವನೆ ಪಾವತಿಸಲು ಸಭೆಯು ಅನುಮೋದಿಸಿತು.** |
| 04 | ವಿಷಯ:ವಿಶ್ವವಿದ್ಯಾಲಯದ ಪ್ರತಿ ವಿಭಾಗಕ್ಕೆ ಇಬ್ಬರು ವಿದ್ವಾಂಸರನ್ನು /ವಿಷಯ ಪರಿಣಿತರನ್ನು ಗೌರವ ಪ್ರಾಧ್ಯಾಪಕರನ್ನಾಗಿ ನಿಯೋಜಿಸಿ ಕೊಳ್ಳುವ ಪ್ರಸ್ತಾವ.<br><br>**ನಿರ್ಣಯ: ಸದರಿ ಪ್ರಸ್ತಾವನೆಯನ್ನು ಸಭೆಯು ಒಪ್ಪಿ ವಿಷಯ ಪರಿಣಿತರಿಂದ ಕಾರ್ಯಗಾರಗಳನ್ನು ಆಯೋಜಿಸುವಂತೆ ಸಭೆಯು ಸಲಹೆ ನೀಡಿ ಅನುಮೋದಿಸಿತು.** |
| 05 | ವಿಷಯ:ವಿಶ್ವವಿದ್ಯಾಲಯದ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಉತ್ತರ ಪತ್ರಿಕೆಗಳನ್ನು ಆಂತರಿಕ ಮೌಲ್ಯಮಾಪಕರಿಂದ Single Valution ಮಾಡಿಸುವ ಪ್ರಸ್ತಾವ.<br><br>**ನಿರ್ಣಯ: ಹಿಂದಿನ ಸಭೆಯ ನಡವಳಿಯನ್ನು ಸ್ಥಿರಿಕರಿಸು ಸಂದರ್ಭದಲ್ಲಿ ಏಕ ಸದಸ್ಯ ಮೌಲ್ಯಮಾಪನಕ್ಕೆ ಸಭೆಯು ಒಪ್ಪಿಗೆ ಸೂಚಿಸಿತು ಹಾಗೂ ಆಂತರಿಕ ಮೌಲ್ಯಮಾಪನದ ಸಾಧಕ–ಭಾದಕಗಳನ್ನು ಚರ್ಚಿಸಿ ಆಂತರಿಕ ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸುವುದನ್ನು ಮುಂದೂಡುವಂತೆ ಸಭೆಯು ಸೂಚಿಸಿತು. ಹಾಗೂ ಈ ಹಿಂದೆ ನಡೆಯುತ್ತಿದ್ದ ರೀತಿಯಲ್ಲಿ ಮೌಲ್ಯಮಾಪನ ಮಾಡಿಸುವುದನ್ನು ಮುಂದುವರೆಸುವಂತೆ ಸಭೆಯು ಒಪ್ಪಿ ಅನುಮೋದಿಸಿತು.** |
| 06 | ವಿಷಯ: 2021–22 ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸರ್ಟಿಫಿಕೇಟ್, ಡಿಪ್ಲೊಮಾ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಫಲಿತಾಂಶಕ್ಕೆ ಅನುಮೋದನೆ ಪಡೆಯುವ ಪ್ರಸ್ತಾವ.<br><br>**ನಿರ್ಣಯ: 2021–22 ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸರ್ಟಿಫಿಕೇಟ್, ಡಿಪ್ಲೊಮಾ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಫಲಿತಾಂಶಕ್ಕೆ ಅನುಮೋದನೆ ನೀಡಿತು.** |
| 07 | ವಿಷಯ: 2022–23 ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸರ್ಟಿಫಿಕೇಟ್, ಡಿಪ್ಲೋಮಾ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿ ಸಂಬಂಧದ ಪ್ರಸ್ತಾವ.<br><br>**ನಿರ್ಣಯ: 2022–23 ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸರ್ಟಿಫಿಕೇಟ್, ಡಿಪ್ಲೊಮಾ ಮತ್ತು ಸ್ನಾತಕೋತ್ತರ** |

ಕುಲಸಚಿವ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004

ಕುಲಪತಿ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

| | |
|---|---|
| | ಕೋರ್ಸ್‌ಗಳ ಪ್ರವೇಶಾತಿಯ ಬಗ್ಗೆ ಪತ್ರಿಕ ಮಾಧ್ಯಮ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಮತ್ತು ವಿಶ್ವವಿದ್ಯಾಲಯವು ಪ್ರಾದೇಶಿಕವಾಗಿ ಪತ್ರಿಕಾ ಗೋಷ್ಠಿಗಳನ್ನು ನಡೆಸುವ ಮೂಲಕ ವಿಶ್ವವಿದ್ಯಾಲಯದ ಪ್ರವೇಶಾತಿಯನ್ನು ಹೆಚ್ಚಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಲಹೆ ನೀಡಿ ಅನುಮೋದಿಸಿತು. |
| 08 | ವಿಷಯ: 2022–23 ನೇ ಸಾಲಿನ ವಿವಿಧ ಶೈಕ್ಷಣಿಕ ಚಟುವಟಿಕೆಗಳ ಕುರಿತು ಚರ್ಚಿಸುವ ಸಂಬಂಧದ ಪ್ರಸ್ತಾವ.<br><br>ನಿರ್ಣಯ: ಶೈಕ್ಷಣಿಕ ವೇಳಾಪಟ್ಟಿಯಲ್ಲಿ ರಾಷ್ಟ್ರೀಯ ಹಬ್ಬಗಳು, ವಿಚಾರ ಸಂಕೀರ್ಣಗಳು, ಕಾರ್ಯಗಾರಗಳು, ರಾಷ್ಟ್ರೀಯ ಸೇವಾ ಶಿಬಿರ, ಕಾರ್ಯಗಾರಗಳು ಹಾಗೂ ಉತ್ಸವಗಳನ್ನು ಒಳಗೊಂಡ ಶೈಕ್ಷಣಿಕ ವೇಳಾಪಟ್ಟಿಯನ್ನು ಸಭೆಯು ಅನುಮೋದಿಸಿತು. ಈ ವರ್ಷ ದಸರಾ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರಿಗೆ ವಿಶ್ವವಿದ್ಯಾಲಯದ ಆವರಣದ ವೇದಿಕೆಯಲ್ಲಿ 7 ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ನಡೆಸುವಂತೆ ಸಭೆಯು ತೀರ್ಮಾನಿಸಿತು. ವಿಶ್ವವಿದ್ಯಾಲಯದ **2022–23** ನೇ ಸಾಲಿನ ಮಾಹಿತಿ ಪುಸ್ತಕವನ್ನು (**Prospectus**) ಸಭೆಯು ಅನುಮೋದಿಸಿತು. |
| 09 | ವಿಷಯ: ವಿಶ್ವವಿದ್ಯಾಲಯದ ನಾಟಕ ಡಿಪ್ಲೊಮಾ ಕೋರ್ಸ್‌ನ್ನು ಮೈಸೂರಿನ ರಂಗಯಾಣ ಸಂಸ್ಥೆಯಲ್ಲಿ ನಡೆಸುತ್ತಿರುವಂತೆ ಧಾರವಾಡ, ಶಿವಮೊಗ್ಗ, ದಾವಣಗೆರೆ ಮತ್ತು ಗುಲ್ಬರ್ಗದ ರಂಗಯಾಣ ಸಂಸ್ಥೆಗಳು ಹಾಗೂ ಸಾಣೆಹಳ್ಳಿಯ ಶಿವಸಂಚಾರ ಮತ್ತು ಸಾಗರದ ನಿನಾಸಂ ಸಂಸ್ಥೆಗಳಲ್ಲಿ ನಡೆಸುವ ಸಂಬಂಧ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವ.<br><br>ನಿರ್ಣಯ: ವಿಶ್ವವಿದ್ಯಾಲಯದ ನಾಟಕ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳನ್ನು ಮೈಸೂರಿನ ರಂಗಯಾಣದಲ್ಲಿ ನಡೆಸುತ್ತಿರುವಂತೆ ಧಾರವಾಡ, ಶಿವಮೊಗ್ಗ, ದಾವಣಗೆರೆ ಮತ್ತು ಗುಲ್ಬರ್ಗದ ರಂಗಯಾಣ ಸಂಸ್ಥೆಗಳು ಹಾಗೂ ಸಾಣೆಹಳ್ಳಿಯ ಶಿವಸಂಚಾರ ಮತ್ತು ಸಾಗರದ ನಿನಾಸಂ ಸಂಸ್ಥೆಗಳ ನಿರ್ದೇಶಕರೊಂದಿಗೆ ವಿಶ್ವವಿದ್ಯಾಲಯದ ಆಡಳಿತವು ಚರ್ಚಿಸಿ ಈ ಸಂಸ್ಥೆಗಳು ಸರ್ಕಾರದ ಅನುದಾನಿತ ಸಂಸ್ಥೆಗಳಾಗಿರುವುದರಿಂದ ಈ ಸಂಸ್ಥೆಗಳಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಸಭೆಯು ಅನುಮೋದಿಸಿತು. |
| 10 | ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು. |
| 10.1 | ನಿರ್ಣಯ: ಸರ್ಕಾರದಿಂದ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ವಿವಿಧ ಬೋಧಕೇತರ ಹುದ್ದೆಗಳನ್ನು ನೇಮಕಾತಿ ಮಾಡುವ ಸಂಬಂಧ ವಿಶ್ವವಿದ್ಯಾಲಯವು ರಚಿಸಿರುವ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಗೆ ಘನತವೆತ್ತ ಕುಲಾಧಿಪತಿವರ ಅನುಮೋದನೆ ದೊರಕಿಸಿಕೊಳ್ಳಲು ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು. |
| 10.2 | ನಿರ್ಣಯ: ಪ್ರೌಢಶಿಕ್ಷಣ ಮಂಡಳಿಯು ನಡೆಸುತ್ತಿದ್ದ ಜೂನಿಯರ್ (ಕಿರಿಯ) ಮತ್ತು ಸಿನಿಯರ್ (ಹಿರಿಯ) ಶ್ರೇಣಿಯ ಹಾಗೂ ವಿದ್ವತ್ ಪರೀಕ್ಷೆಗಳನ್ನು ಸರ್ಕಾರದ ಆದೇಶದಂತೆ (ಸರ್ಕಾರದ ಆದೇಶ ಸಂಖ್ಯೆ: ಇಡಿ 299 ಎಸ್‌ಎಲ್‌ಜಿ 2011, ದಿನಾಂಕ:08.02.2012) ನಮ್ಮ ವಿಶ್ವವಿದ್ಯಾಲಯ ನಡೆಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಭೆಯು ತೀರ್ಮಾನಿಸಿತು. ಈ ಕುರಿತು ದಿನಾಂಕ:24.06.2022 ರಂದು ಮೈಸೂರಿನ ಸಂಗೀತ ಮತ್ತು ನಾಟಕ ವಿದ್ವಾಂಸರ ಸಭೆಯನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದು ಈ ಸಭೆಯಲ್ಲಿ ಪಠ್ಯಕ್ಕೆ ಸಂಬಂಧಿಸಿದಂತೆ ಪರೀಕ್ಷೆಯ ಪಾರದರ್ಶಕತೆ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಹಾಲವಾರು ಸಲಹೆಗಳನ್ನು ತಜ್ಞರು ನೀಡಿದ್ದಲ್ಲದೆ ಅಧ್ಯಯನ ಮಂಡಳಿ ಮತ್ತು ಪರೀಕ್ಷ ಮಂಡಳಿಗಳನ್ನು ಪುನರ್ ರಚಿಸುವಂತೆ ಸಲಹೆ ನೀಡಿದರು. ಮೇಲ್ಕಂಡ ಎಲ್ಲಾ ವಿಷಯಗಳನ್ನು ಪರಿಗಣಿಸಿ ವಿಶ್ವವಿದ್ಯಾಲಯವು ಸಂಗೀತಾದಿ ಪ್ರದರ್ಶಕ ಕಲೆಗಳನ್ನು ಉಳಿಸಿ, ಪ್ರೋತ್ಸಾಹಿಸಿ ಆಧುನಿಕ ಶಿಕ್ಷಣ ನೀಡುವ ಧ್ಯೇಯ ಹೊಂದಿರುವುದರಿಂದ ಮುಂದಿನ ದಿನಗಳಲ್ಲಿ |

ಕುಲಸಚಿವ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004

ಕುಲಪತಿ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್

| | |
|---|---|
| | ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸಮರ್ಪಕವಾಗಿ ಜಾರಿಗೊಳಿಸುವ ಹಿನ್ನಲೆಯಲ್ಲಿ ಮೇಲ್ಕಂಡ ವಿಷಯಗಳಲ್ಲಿ ಪರೀಕ್ಷೆಗಳನ್ನು ಆಯೋಜಿಸಲು ಸಭೆಯು ಒಪ್ಪಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತೀರ್ಮಾನಿಸಿರುವುದನ್ನು ಸಭೆಯು ಮೆಚ್ಚುಗೆ ವ್ಯಕ್ತಪಡಿಸಿ ಅನುಮೋದಿಸಿತು. ಪ್ರಶಾಸನ ಮತ್ತು ಪ್ರಶಿಕ್ಷಣ ಸಭೆಯ ಸದಸ್ಯರನ್ನು ಒಳಗೊಂಡ ಒಂದು ನಿಯೋಗವು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಲು ಸಭೆಯು ಸಲಹೆಯನ್ನು ನೀಡಿ ಅನುಮೋದಿಸಿತು. |
| 10.3 | ನಿರ್ಣಯ: ಮಾನ್ಯ ಜಿಲ್ಲಾಧಿಕಾರಿಗಳು ಹುಬ್ಬಳಿ-ಧಾರವಾಡ ಮತ್ತು ಕಾರ್ಯಾಧ್ಯಕ್ಷರು ಡಾ.ಗಂಗೂಬಾಯಿ ಹಾನಗಲ್ ಟ್ರಸ್ಟ್, ಉಣಕಲ್ ಇವರು ಬರೆದಿರುವ ಪತ್ರದಲ್ಲಿನ ವಿಷಯವನ್ನು ಕುರಿತು ಸುಧೀರ್ಘವಾಗಿ ಚರ್ಚಿಸಿ ಗುರುಕುಲ ಟ್ರಸ್ಟ್‌ನಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಭೆಯು ಅನುಮೋದಿಸಿತು. ಈ ಕುರಿತು ಮಾನ್ಯ ಕುಲಪತಿಗಳು ಮುಂದಿನ ಸೂಕ್ತ ಕ್ರಮಕೈಗೊಳ್ಳಲು ಸಭೆಯು ಒಪ್ಪಿಗೆ ಸೂಚಿಸಿತು. |
| 10.4 | ನಿರ್ಣಯ: ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು ಈ ಸಂಸ್ಥೆಯು ಸರ್ಕಾರದ ಅನುದಾನಿತ ಸಂಸ್ಥೆ ಆದ್ದರಿಂದ ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಸರ್ಟಿಫಿಕೇಟ್ ಮತ್ತು ಡಿಪ್ಲೊಮೊ ಕೋರ್ಸ್‌ಗಳಿಗೆ ಒಡಂಬಂಡಿಕೆ ಮಾಡಿಕೊಳ್ಳಲು ಸಭೆಯು ಚರ್ಚಿಸಿ ಅನುಮೋದಿಸಿತು. ಇನ್ನುಳಿದಂತೆ ಸ್ಥಳೀಯ ಪರಿಶೀಲನಾ ಸಮಿತಿಗಳು ಭೇಟಿ ನೀಡಿ ಶಿಫಾರಸ್ಸು ಮಾಡಿರುವ ಸಂಸ್ಥೆಗಳಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ತರಗತಿಗಳನ್ನು ಪ್ರಾರಂಭಿಸಲು ಸಭೆಯು ತೀರ್ಮಾನಿಸಿತು. ಮುಂದುವರಿದು ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ನಡೆಸಲು ಇಚ್ಛಿಸಿರುವ ಸಂಸ್ಥೆಗಳಿಗೆ ಸರ್ಕಾರದಿಂದ ಪರಿನಿಯಮಾವಳಿ ಅನುಮೋದನೆ ನೀಡಿದ ನಂತರ ಅನುಮತಿ ನೀಡಲು ಸಭೆಯು ತೀರ್ಮಾನಿಸಿತು. |

ಅಂತಿಮವಾಗಿ ಪ್ರಶಿಕ್ಷಣ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರು ಸಭೆಯನ್ನು ಯಶಸ್ವಿಗೊಳಿಸಿದ ಎಲ್ಲಾ ಸದಸ್ಯರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವರು
ಪದನಿಮಿತ್ತ ಸದಸ್ಯ ಕಾರ್ಯದರ್ಶಿ
ಪ್ರಶಿಕ್ಷಣ ಸಮಿತಿ
ಕುಲಸಚಿವ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004

ಕುಲಪತಿ
ಅಧ್ಯಕ್ಷರು
ಪ್ರಶಿಕ್ಷಣ ಸಮಿತಿ
ಕುಲಪತಿ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004